ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ ತಿದ್ದುಪಡಿ ಮಸೂದೆ

ಜನರ ಕೈಗೆ ಅಧಿಕಾರ

ದಾಮೋದರ ಆಚಾರ್ಯ
ಪ್ರಧಾನ ಕಾರ್ಯದರ್ಶಿ
ಗ್ರಾಮ ಪಂಚಾಯತ್ ಹಕ್ಕೊತ್ತಾಯ
ಆಂದೋಲನ, ಕರ್ನಾಟಕ
9448121387

ಕರ್ನಾಟಕ ರಾಜ್ಯದ ಪಂಚಾಯಿತ್ ವ್ಯವಸ್ಥೆ ಇಡೀ ದೇಶಕ್ಕೆ ಮಾದರಿಯಾಗಿದ್ದು. ಅದಾದ ನಂತರ ದೇಶದಲ್ಲಿ 73ನೇ ತಿದ್ದುಪಡಿ ತಂದು ಹೊಸ ವ್ಯವಸ್ಥೆ ತರಲಾಯಿತು. ಈ ಹಂತದಲ್ಲಿ ಅನೇಕ ಬದಲಾವಣೆಗಳು ಆದವು. ಪಂಚಾಯಿತ್ ರಾಜ್ಯ ವ್ಯವಸ್ಥೆ ನಿರಂತರ ಏಳು ಬೀಳು ಕಂಡಿವೆ. ಇದೀಗ ಕರ್ನಾಟಕ ಸರ್ಕಾರ ಈ ಅಧಿನಿಯಮಕ್ಕೆ ತಿದ್ದುಪಡಿ ತರಲು ಹೊರಟಿದೆ. ಇದನ್ನು ಹತ್ತಿರದಲ್ಲಿ ಕಂಡ ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನ ಪ್ರಧಾನ ಕಾರ್ಯದರ್ಶಿ ದಾಮೋದರ ಆಚಾರ್ಯ ಈ ಬಗ್ಗೆ ವಿಶೇಷ ಲೇಖನವನ್ನು ಬರೆದಿದ್ದಾರೆ.

-ಸಂಪಾದಕ

"ಈ ದೇಶವು ಸ್ವಾತಂತ್ರ್ಯಗಳಿಸಿಕೊಂಡ ನಂತರ ನಾವು ರಚಿಸಿಕೊಂಡ ರಾಜಕೀಯ ಆಡಳಿತ ವ್ಯವಸ್ಥೆಯ ಆಧಾರ ನಮ್ಮ ಪವಿತ್ರ ಸಂವಿಧಾನ. ಆ ಸಂವಿಧಾನ ಏನು ಹೇಳುತ್ತದೆ ಎಂದರೆ, "ಈ ದೇಶದ ಪ್ರಜೆಗಳಾದ ನಾವು ನಮಗೆ ನಾವೇ ಕೊಟ್ಟುಕೊಂಡ ಸಂವಿಧಾನ." ಎಂದರೆ, ಹಕ್ಕುಗಳೆಲ್ಲಾ ಈ ದೇಶದ ಪ್ರಜೆಗಳಲ್ಲಿದೆ, ಆ ಹಕ್ಕುಗಳಿರುವ ಪ್ರಜೆಗಳೆಲ್ಲಾ ನಿತ್ಯವೂ ದೆಹಲಿಯಲ್ಲಿ ಸೇರಿ ಅಥವಾ ಬೆಂಗಳೂರಲ್ಲಿ ಸೇರಿ ಅಥವಾ ಉಡುಪಿಯಲ್ಲಿ ಸೇರಿ ಅಥವಾ ಕುಂದಾಪುರದಲ್ಲಿ ಸೇರಿ ನಿತ್ಯವೋ ಪ್ರತಿ ತಿಂಗಳಿಗೊಮ್ಮೆಯೋ 6 ತಿಂಗಳಿಗೊಮ್ಮೆಯೋ ಸೇರಿ ತೀರ್ಮಾನ ತೆಗೆದುಕೊಳ್ಳಲಾಗದೆಂಬ ಕಾರಣದಿಂದಾಗಿ ನಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡಿ ನಮ್ಮ ಪರವಾಗಿ ನಮಗೇನು ಬೇಕು, ಆ ಬಗ್ಗೆ ನೀವು ತೀರ್ಮಾನ ತೆಗೆದುಕೊಳ್ಳಿ ಎಂದು ಹೇಳಿ, ಬೇರೆ ಬೇರೆ ಹಂತಗಳಲ್ಲಿ ಪ್ರತಿನಿಧಿಸರ್ಕಾರ ರಚಿಸಿಕೊಂಡೆವು. ಆದರೆ ಸಂವಿಧಾನದ ಈ ಆಶಯಗಳನ್ನು ಅರ್ಥಮಾಡಿಕೊಳ್ಳದೇ, ಸ್ವಾತಂತ್ರ್ಯಾನಂತರ ಸರ್ಕಾರ ವಿಪರೀತ ಕೇಂದ್ರೀಕರಣದಿಂದ ತನ್ನ ಜನರಿಗೆ ಅಗತ್ಯವಿರುವುದನ್ನು ಸಾಧಿಸಲಾರದೇ, ಅಧಿಕಾರಶಾಹಿಯು ಬೆಳೆದು ಸಂಪತ್ತೆಲ್ಲ ಅವರನ್ನು ನಿಭಾಯಿಸಲು ಎನ್ನುವಂತಾಗಿ ನಿಂತರೆ, ಇನ್ನೊಂದೆಡೆ ರಾಜಕೀಯ ದಲ್ಲಾಳಿಗಳು ಹುಟ್ಟಿಕೊಂಡು ಯಾವುದೇ ಯೋಜನೆ ಆದರೂ ಕೇಂದ್ರ ಸರ್ಕಾರದಿಂದ ಯೋಜಿಸಿದರೆ ಅದು ಹಳ್ಳಿ ಮುಟ್ಟುವಾಗ ರೂಪಾಯಿಗಳೆಲ್ಲ ಕರಗಿ ಕೆಲಪೈಸೆಗಳು ಹಳ್ಳಿ ತಲುಪುವಂತಾಗುತ್ತಿತ್ತು.

ಇನ್ನೊಂದು ರೀತಿಯಲ್ಲಿ ನೋಡುವುದಿದ್ದರೆ, ಹೀಗೆ ಜನರಿಂದ ಎರವಲು ಪಡೆದ ಜನರ ಹಕ್ಕು, ತಮ್ಮದೇ ಹಕ್ಕು ಎನ್ನುವ ರೀತಿಯಲ್ಲಿ ಅನುಭವಿಸುತ್ತಾ, ಕ್ರಮೇಣ ಜನರಿಗೆ ಏನು ಬೇಕು, ಅಭಿವೃದ್ಧಿ ಹೇಗಿರಬೇಕು, ಯೋಜನೆಗಳೇನು, ಕಾರ್ಯಕ್ರಮಗಳಾವುವು, ಇದು ಎಲ್ಲಿ ನಿರ್ಧಾರವಾಗಬೇಕೋ ಅಲ್ಲಿ ನಿರ್ಧಾರಗಳಾಗದೇ, ದೆಹಲಿಯಲ್ಲಿ, ಬೆಂಗಳೂರಿನಲ್ಲಿ ತೀರ್ಮಾನವಾಗಲು ಪ್ರಾರಂಭವಾಯಿತು. ಮತ್ತು ಅದು ಅಲ್ಲಲ್ಲೇ ಕೇಂದ್ರೀಕೃತಗೊಂಡಿತು. ಹೀಗಾಗಿ, ಜನರಿಂದ, ಜನರಿಗಾಗಿ, ಜನರ ಸರ್ಕಾರ ಎನ್ನುವಲ್ಲಿ ಜನ ಭಾಗವಹಿಸುವಿಕೆ ಅಂದರೆ ಬರೀ ಚುನಾವಣಾ ಸಮಯ ಮಾತ್ರ ಎನ್ನುವಂತ ಪರಿಸ್ಥಿತಿ ಬಂತು, ಅದರ ಪರಿಣಾಮ ತೀರ್ಮಾನಗಳು, ಬೆಂಗಳೂರು ದೆಹಲಿ ದಾಟಿ ಅದರ ಹೊರಗಡೆ ಮತ್ತೆಲ್ಲೋ ಆಗಲು ಪ್ರಾರಂಭವಾಯಿತು. ಯೋಜನೆಗಳು ಎಲ್ಲೋ ರಚನೆಯಾಗ ತೊಡಗಿದವು. ಕಾರ್ಯಕ್ರಮಗಳು ಮತ್ತೆಲ್ಲೋ ಆಗಿ ಹೇರಲ್ಪಟ್ಟವು. ಅಭಿವೃದ್ಧಿಯ ಫಲ ಕಾರ್ಯಕ್ರಮಗಳು ಜನರನ್ನು ಬೇಕಾದ ರೀತಿಯಲ್ಲಿ ತಲುಪಲು ಸಾಧ್ಯವಾಗಲಿಲ್ಲ. ಆ ಸಂದರ್ಭದಲ್ಲಿ 80ರ ದಶಕದಲ್ಲಿ ಕರ್ನಾಟಕದಲ್ಲಿ ಹೊಸ ಶಕೆ ಪ್ರಾರಂಭವಾಯಿತು. ಅಧಿಕಾರದ ವಿಕೇಂದ್ರೀಕರಣ, ಬೆಂಗಳೂರಿನಿಂದ ಸರ್ಕಾರ ಪ್ರತಿ ಹಳ್ಳಿಯಲ್ಲಿ ಸಣ್ಣ ಸಣ್ಣ ಸರ್ಕಾರಗಳಾಗಿ ಅಲ್ಲಲ್ಲೆ ಅನುಷ್ಠಾನದ, ಅಲ್ಲಲ್ಲೇ ಆಡಳಿತದ ಕಲ್ಪನೆ ಹುಟ್ಟಿ ಹಾಕಲ್ಪಟ್ಟಿತು. ಕರ್ನಾಟಕದಲ್ಲಿ ಅದು ಹೊಸ ಅಲೆಯೊಂದನ್ನು ಸೃಷ್ಟಿಸಿತು. ಪ್ರತಿ ಗ್ರಾಮದಲ್ಲಿ ಕಾರ್ಯಕ್ರಮಗಳು, ಚಟುವಟಿಕೆಗಳು ತೀವ್ರಗತಿ ಪಡೆದುಕೊಂಡಿತು. ಸರ್ಕಾರ ಎನ್ನುವುದು ನಮ್ಮ ನಮ್ಮ ಹಳ್ಳಿಗಳಲ್ಲಿ ಬಂದು ನಿಂತು ಕಾರ್ಯಕ್ರಮ ಅನುಷ್ಠಾನಗೊಂಡಿತು. ಇದರಿಂದ ಸ್ಪೂರ್ತಿ ಪಡೆದ ಅಂದಿನ ಕೇಂದ್ರ ಸರ್ಕಾರ, ಶ್ರೀ ರಾಜೀವ ಗಾಂಧಿ ನೇತೃತ್ವದ ಸರ್ಕಾರ, ಈ ದೇಶದ, ಜನರ ಅಭಿವೃದ್ಧಿಯ ಕಾಳಜಿ ಹೊತ್ತು ಹೊಸ ನೆಲೆಯನ್ನು ಹುಡುಕಿಕೊಳ್ಳುವಲ್ಲಿ ನಮ್ಮ ಸಂವಿಧಾನದ ನಿಜ ಆಶಯಗಳನ್ನು ಕಂಡುಕೊಂಡು, ಪ್ರಜಾಪ್ರಭುತ್ವವು ನಿಜ ಸಾಕಾರದತ್ತ ನಡೆಯಲು ಸಂವಿಧಾನಕ್ಕೆ ತಿದ್ದುಪಡಿ ತರಲು ನಿರ್ಧರಿಸಿತು. ಹಾಗೇ ಸಂವಿಧಾನದ ತಿದ್ದುಪಡಿಯನ್ನು ಸಂಸತ್ತಿನಲ್ಲಿ ಮಂಡಿಸುತ್ತಾ ಅವರು ಹೇಳಿದ ಮಾತು ಅಂದಿನ ಪರಿಸ್ಥಿತಿಗೆ ಹಿಡಿದ ಕನ್ನಡಿಯಂತಿತ್ತು.

1989ರಲ್ಲಿ ಸಂವಿಧಾನಕ್ಕೆ 73ನೇ ತಿದ್ದುಪಡಿಯನ್ನು ಸೂಚಿಸಿ ಆಗಿನ ಪ್ರಧಾನಿ ದಿವಂಗತ ಶ್ರೀ ರಾಜೀವ ಗಾಂಧಿ ಅವರು ಆಡಿದ ಅತ್ಯಂತ ಭಾವನಾತ್ಮಕ ಭಾಷಣದಿಂದ ಕೆಲವು ಅಂಶಗಳನ್ನು ಈ ಸಮಯದಲ್ಲಿ ನೆನಪಿಸಿಕೊಳ್ಳುವುದು ಸೂಕ್ತ ಎಂದೆನಿಸುತ್ತದೆ. ಆ ಭಾಷಣದಲ್ಲಿ ಅವರು ತಮ್ಮ ಹಳ್ಳಿಗಳ ಭೇಟಿಯಿಂದ, ಲೆಕ್ಕವಿಲ್ಲದಷ್ಟು ಜನರ ಜೊತೆಗಿನ ಮಾತುಕತೆಯಿಂದ ಆದ ಅನುಭವವನ್ನು ಹೀಗೆ ನಿರೂಪಿಸಿದ್ದಾರೆ.

"ನಾನು ನೂರಾರು ಹಳ್ಳಿಗಳನ್ನು ತಿರುಗಿದ್ದೇನೆ. ಲೆಕ್ಕವಿಲ್ಲದಷ್ಟು ಜನರೊಂದಿಗೆ ಮಾತನಾಡಿದ್ದೇನೆ. ನಮ್ಮ ಆಡಳಿತಗಾರರಿಂದ ಜನರು ಅನುಭವಿಸುವ ಹೃದಯಹೀನ ದಬ್ಬಾಳಿಕೆ, ಅವರಿಗೆ ಪ್ರತಿಸ್ಪಂದಿಸದ, ಅನುಕಂಪಹೀನ ಆಡಳಿತದ ಕ್ರೌರ್ಯವನ್ನು ಅವರ ಮನೆಗಳಲ್ಲಿ ಮತ್ತು ಮನೆ0ಯಂಗಳಗಳಲ್ಲಿ ಅನುಭವಿಸಿದ್ದೇನೆ.

ರಾಜಕೀಯ ಅಧಿಕಾರವಿಲ್ಲದ ತಳಮಟ್ಟದ ಆಡಳಿತ, ಉಪ್ಪಿಲ್ಲದ ಊಟದಂತೆ ಎಂದು ನಾವು ಅರಿತುಕೊಂಡೆವು. ನಮ್ಮ ಜಿಲ್ಲಾಡಳಿತ ಎಷ್ಟೆಲ್ಲ ಒಳ್ಳೆಯ ಉದ್ದೇಶ ಹೊಂದಿದ್ದರೂ, ಸ್ಥಳೀಯ ಮಟ್ಟದಲ್ಲಿ ಪರಿಣಾಮಕಾರಿಯಾದ ಚುನಾಯಿತ ಆಡಳಿತ ವ್ಯವಸ್ಥೆ ಇಲ್ಲದೇ ಹೋದರೆ, ಜನರು ಮತ್ತು ಅಧಿಕಾರಿಗಳ ನಡುವಿನ ಕಂದಕವನ್ನು ಮುಚ್ಚಲು ಅಸಾಧ್ಯ ಎಂಬುದನ್ನು ಕಲಿತಿದ್ದೇವೆ. ಸ್ಥಳೀಯ ಮಟ್ಟದಲ್ಲಿ ರಾಜಕೀಯ ವ್ಯವಸ್ಥೆಗಳು ಇಲ್ಲದ ಕಾರಣದಿಂದ ಸೃಷ್ಟಿಯಾಗಿರುವ ನಿರ್ವಾತದಿಂದಾಗಿ ಅನೇಕ 'ಅಧಿಕಾರ ದಲಾಲಿಗಳು (ರಾಜಕೀಯ ಪುಡಾರಿಗಳು)' ಹುಟ್ಟಿಕೊಂಡು, ವಿಧಾನ ಸಭೆಗೂ ಇನ್ನೂ ದೂರದಲ್ಲಿರುವ ಲೋಕ ಸಭೆಗೂ ಹಾಗೂ ಜನರ ನಡುವೆ ಇರುವ ಅವಕಾಶವನ್ನು ಅವರು ಆಕ್ರಮಿಸಿಕೊಂಡಿದ್ದರೆಂದು ತಿಳಿದುಕೊಂಡೆವು. ಪಂಚಾಯತ್‌ಗಳಿಗೆ ಅಧಿಕಾರ ನೀಡಿ, ಪಂಚಾಯತ್‌ಗಳು ಜನರಿಗೆ ಬದ್ಧರಾಗುವಂತೆ ಮಾಡುವುದರಿಂದ ಮಾತ್ರ ಆಕ್ರಮ ವ್ಯವಹಾರಗಳನ್ನು ತಡೆಗಟ್ಟಲು ಸಾಧ್ಯ ಎಂದು ಅರಿತಿದ್ದೇವೆ.

ಸ್ಥಳೀಯ ಮಟ್ಟದಲ್ಲಿ ಜನರ ಅಭಿವೃದ್ಧಿಗೆ ಅವರನ್ನೇ ಹೊಣೆಗಾರರಾರನ್ನಾಗಿ ಮಾಡಿದಾಗ ಮಾತ್ರ, ಆಡಳಿತದಲ್ಲಿ ಅಧಕ್ಷತೆಯನ್ನು ತೊಡೆದು ಹಾಕಲು ಸಾಧ್ಯ ಎಂದು ತಿಳಿದ್ದೇವೆ. ಜನರನ್ನು ಸಶಕ್ತರಾನ್ನಾಗಿಸಿದಾಗ, ಸ್ಥಳೀಯ ಸ್ವಯಂ ಆಡಳಿತ ಸರ್ಕಾರ ವ್ಯವಸ್ಥೆಗೆ ಅವರು ತಮ್ಮ ಪ್ರತಿನಿಧಿಗಳನ್ನು ಚುನಾಯಿಸಿ ಕಳುಹಿಸಿ ಕೊಟ್ಟಾಗ ಮಾತ್ರ ಆಡಳಿತದಲ್ಲಿರುವ ನಿರ್ದಯತೆಯನ್ನು ತೆಗೆದು ಹಾಕಲು ಸಾಧ್ಯ ಎಂದು ಕಲಿತೆವು."

ಶ್ರೀ ರಾಜೀವ ಗಾಂಧಿಯವರ ಈ ಮಹದಾಶಯ ಮುಂದೆ ಸಂವಿಧಾನದ 73ನೇ ತಿದ್ದುಪಡಿಯಾಗಿ ಇಡೀ ದೇಶದಲ್ಲಿ ವಿಕೇಂದ್ರೀಕರಣದ ಹೊಸ ಅಲೆಯೊಂದನ್ನು ಸೃಷ್ಟಿಸಿತು. 73ನೇ ತಿದ್ದುಪಡಿಯ ಆಧಾರದಲ್ಲಿ ಕರ್ನಾಟಕದಲ್ಲಿ 1993ರಲ್ಲಿ ಪಂಚಾಯತ್ ರಾಜ್ ಕಾಯ್ದೆ ಜಾರಿಗೆ ಬಂದಿತು. ಗ್ರಾಮ ಸಭೆ ಸಂವಿಧಾನಬದ್ಧ ವ್ಯವಸ್ಥೆಯಾಯಿತು. ತ್ರಿಸ್ತರ ಪಂಚಾಯತ್‌ಗಳ ಸೃಷ್ಟಿಯಾಯಿತು. ಜನರ ನಿತ್ಯದ ಅವಶ್ಯಕತೆಗಳಲ್ಲಿ ಜನರ ತೀರ್ಮಾನ ಮುಖ್ಯ ಎನಿಸುವ 29 ವಿಷಯಗಳನ್ನು ಈ ಮೂರೂ ಹಂತದ ಪಂಚಾಯತ್‌ಗಳಿಗೆ ಹಸ್ತಾಂತರಿಸುವ ಆಶಯವಿತ್ತು. ಎಲ್ಲಿ ಏನು ಕೆಲಸವೋ ಅಲ್ಲಿಗೇ ಕಾರ್ಯಕ್ರಮ, ಅನುಷ್ಠಾನ ಎನ್ನುವಂತಾಯಿತು. ಗ್ರಾಮ ಸಭೆಗಳ ಮೂಲಕ ಜನರು ತೀರ್ಮಾನಗಳಲ್ಲಿ ನೇರ ಭಾಗವಹಿಸುವಿಕೆಗೆ ವೇದಿಕೆ ರೂಪಿಸಲಾಯಿತು. ಸಂವಿಧಾನದ ಆಶಯ ಏನಿದ್ದರೂ, ಕಾಯ್ದೆ ಎಷ್ಟೇ ಚೆನ್ನಾಗಿದ್ದರೂ ಸಾಕಾಗುವುದಿಲ್ಲ, ರಾಜಕೀಯ ಇಚ್ಛಾಶಕ್ತಿ ಬೇಕು, ಬೇಲೂರು ಘೋಷಣೆ ಮಾಡಿ ನಂತರ ವಿಧಾನ ಮಂಡಲ ಭರವಸೆಯೂ ನೀಡಿ ಸರ್ಕಾರದ ಆದೇಶದಂತೆ 29 ವಿಷಯಗಳು, ಅದಕ್ಕೆ ಸಂಬಂಧಪಟ್ಟ ಕಾರ್ಯಕ್ರಮಗಳು ಮೂರು ಹಂತದ ಪಂಚಾಯತ್‌ಗಳಿಗೆ ಹಸ್ತಾಂತರಿಸಲಾಯಿತು. ಮುಂದೆ ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದ ಸ್ಥಳೀಯ ಪಂಚಾಯತ್‌ಗಳು ಸಂಘಟಿತರಾಗಿ ತಮ್ಮ ಹಕ್ಕುಗಳಿಗೆ ಹಕ್ಕೊತ್ತಾಯ ಮಾಡದೇ, ಕಾಯ್ದೆಗಳಲ್ಲಿ ಮಾಡಿದ ಬದಲಾವಣೆ ವಿವಿಧ ಸುತ್ತೋಲೆ, ಅಧಿಕಾರಿಶಾಹಿಗಳ ಅನಾಸಕ್ತಿ, ಸ್ಥಳೀಯ ಸರ್ಕಾರಗಳ ಬಗ್ಗೆ ಅಸಡ್ಡೆಗಳಿಂದ ಇಡೀ ವ್ಯವಸ್ಥೆ ಏನೂ ಮಾಡಲಾಗದ ಪರಿಸ್ಥಿತಿಗೆ ಬಂದು ತಲುಪಿತು, ನಿಂತ ನೀರಾಯಿತು.

ಇನ್ನೊಂದು ರೀತಿಯಲ್ಲಿ ಇವು ಸ್ಥಳೀಯ ಸರ್ಕಾರಗಳಾಗದೇ ಕೇಂದ್ರ, ರಾಜ್ಯ ಸರ್ಕಾರಗಳ ಕಾರ್ಯಕ್ರಮ ಹಂಚುವ ಏಜೆನ್ಸಿಗಳಾದವು. ಗ್ರಾಮ ಪಂಚಾಯತ್ ಎನ್ನುವುದು ಮನೆ ಮನೆಗೆ ಹಾಲು ಹಂಚುವ "ಡೆಲಿವರಿ ಬಾಯ್ಸ್"ಗಳಂತೆ. ಈ "ಡೆಲಿವರಿ ಬಾಯ್ಸ್" ಗಳಿಗೆ ಹಾಲಿನ ಬಗ್ಗೆ ಏನೂ ನಿಯಂತ್ರಣವಿಲ್ಲ, ಹಾಲಿನ ಗುಣಮಟ್ಟ, ಅದರಲ್ಲಿ ಮೊಸರು ಆಗಬಲ್ಲದೇ, ಬೆಣ್ಣೆ ಬರಬಹುದೇ, ಅದರ ರುಚಿ, ಅದರ ಅಳತೆ ಇದರ ಬಗ್ಗೆ ಏನೂ ಮಾಡಲೊಲ್ಲನು. ಆದರೆ ಹಾಲು ಕೆಟ್ಟರೆ, ಅಳತೆ ಸರಿ ಇಲ್ಲದಿದ್ದರೆ, ಸರಿಯಾದ ಸಮಯಕ್ಕೆ ಸರಬರಾಜು ಆಗದಿದ್ದರೆ, ಆಗೆಲ್ಲ ಬೈಗುಳ ಗಳಿಸುವುದು ಎಲ್ಲವೂ ಈ ಹುಡುಗ. ಆ ಬಗ್ಗೆ ಅವನು ಸರಬರಾಜುದಾರರಿಗೆ ತಿಳಿಸಬಹುದೇ ವಿನಃ ಅವನೇನೂ ನಿರ್ಧಾರ ತೆಗೆದುಕೊಳ್ಳಲಾರ, ಗುಣಮಟ್ಟ ಬದಲಿಸಲಾರ. ಗ್ರಾಹಕರ ಅಗತ್ಯಕ್ಕೆ ತಕ್ಕಂತೆ ಸ್ಪಂದಿಸಲಾರ. ಇಂತಹುದೇ ಪರಿಸ್ಥಿತಿ ನಮ್ಮ ಗ್ರಾಮ ಪಂಚಾಯತ್‌ಗಳದ್ದು. ಶೌಚಾಲಯದಿಂದ ಹಿಡಿದು ಮನೆಗಳವರೆಗೆ ಎಲ್ಲೋ ಆದ ನಿರ್ಧಾರ, ನೀತಿ, ನಿಯಮ, ಮಾದರಿ, ಕೇಂದ್ರ-ರಾಜ್ಯ ಸರ್ಕಾರದ ಕಾರ್ಯಕ್ರಮಗಳ ಹಂಚಿಕೆದಾರರು ಮಾತ್ರ ಈ ಗ್ರಾಮ ಪಂಚಾಯತ್‌ಗಳು. ಆ ಯೋಜನೆ ತಯಾರಿ, ಕಾರ್ಯಕ್ರಮ ರೂಪಿಸುವ ಯಾವುದೇ ಅಧಿಕಾರ, ಜನರ ಅಗತ್ಯಕ್ಕೆ ತಕ್ಕಂತೆ ಕಾರ್ಯಕ್ರಮ ಪುನರ್ ರೂಪಿಸುವ ಅಧಿಕಾರ ಈ ಗ್ರಾಮ ಸರ್ಕಾರಗಳಿಗಿಲ್ಲ. ಹೀಗಾಗಿ 1993ರ ಕಾಯಿದೆ ಎಷ್ಟೇ ಉದಾತ್ತ, ಉತ್ತಮ ಆಶಯ ಹೊಂದಿದ್ದರೂ ಮುಂದೆ ನಡೆದ ಬೆಳವಣಿಗೆಗಳೆಲ್ಲಾ ಇಂದು ಈ ಪಂಚಾಯತ್‌ಗಳನ್ನು ಏನೂ ಮಾಡಲಾಗದ, ಏನೂ ರೂಪಿಸಲಾಗದ, ಮೇಲಿನ ಹಂತದ ಸರ್ಕಾರಗಳತ್ತ ಕೈಯೆತ್ತಿ, ಬಾಯ್ತೆರೆದು ಯಾಚಿಸುವಂತೆ ಮಾಡಿದೆ.

ಈ ನೆಲೆಯಲ್ಲಿ ಈಗಿನ ಶ್ರೀ ಸಿದ್ಧರಾಮಯ್ಯ ನೇತೃತ್ವದ ಸರ್ಕಾರ ಈ ಪರಿಸ್ಥಿತಿಯ ಪರಿಶೀಲನೆಗೆ ಹೊರಟಿದ್ದು, ಆ ಬಗ್ಗೆ ಏನು ಬದಲಾವಣೆ ಆಗಬೇಕೆಂದು ಸರ್ಕಾರ ನೇಮಿಸಿದ ಶ್ರೀ ರಮೇಶ ಕುಮಾರ್ ನೇತೃತ್ವದ ಸಮಿತಿಯ ಶಿಫಾರಸ್ಸುಗಳು ಯೋಗ್ಯವಾದುದನ್ನು ಮಾಡಿದೆ. ಸಮಿತಿಯು, ಮುಖ್ಯ ಸಾರಾಂಶ ಎಂದು ಹೇಳಿದ ನೆಲೆಯಲ್ಲಿ ನೋಡುವುದಾದದರೆ ಮೂರು ಮುಖ್ಯ ಅಂಶ ಅತೀ ಅಗತ್ಯದ ನೆಲೆಯಲ್ಲಿ ನೋಡಿದೆ ಎನ್ನಬಹುದು.

ಜನಕೇಂದ್ರಿತ:

ಜನರಿಗೆ ಅಧಿಕಾರ: ನೇರ ಭಾಗವಹಿಸುವಿಕೆ, ಉತ್ತರದಾಯಿತ್ವ ಇಲ್ಲಿಯವರೆಗೆ ಇದು ಎಲ್ಲಾ ಪಕ್ಷಗಳ ಘೋಷಣೆಯಾಗಿ ಉಳಿದಿದ್ದೇ ಹೆಚ್ಚು. ಇದನ್ನೇ ಕಾರ್ಯರೂಪಕ್ಕೆ ತರಲು ಇದರಲ್ಲಿ ಹಲವಾರು ಒಳ್ಳೆಯ ಅಂಶಗಳಿವೆ.

ಗ್ರಾಮ ಸಭೆಗೆ ಮುಖ್ಯ ಆದ್ಯತೆ. ಅದರ ಪಾತ್ರದ ಬಗ್ಗೆ ಸ್ಪಷ್ಟತೆ ನೀಡುವ ಮೂಲಕ ಜನರಿಗೆ ತನ್ನ ಹಳ್ಳಿಗೆ, ತನಗೆ ಏನು ಬೇಕೆಂದು ಯೋಜಿಸುವ, ಕಾರ್ಯಕ್ರಮ ರೂಪಿಸಿ ಅಂಗೀಕಾರ ಮಾಡುವ ಸಾರ್ವಭೌಮತ್ವ ನೀಡಿದ್ದು ಪ್ರಜಾಪ್ರಭುತ್ವದ ನಿಜ ಆಶಯದಲ್ಲಿದೆ. ಮೂರು ಹಂತದ ಪಂಚಾಯತ್ ಯೋಜನೆಗೆ, ಗ್ರಾಮ ಸಭೆ ಯೋಜನೆ, ಆಲೋಚನೆ, ನಿರ್ಣಯಗಳೇ ಮುಖ್ಯ ನೆಲೆಯಾಗಿರುವಂತೆ ಮಾಡಿದ್ದು ಜನರಿಗೆ ಅಧಿಕಾರ ಎನ್ನುವುದಕ್ಕೆ ಸಾಕ್ಷಿಯಂತಿದೆ.

ಈ ರೀತಿ ಜನರು ಗ್ರಾಮ ಸಭೆಯ ಮೂಲಕ ನೇರ ಭಾಗವಹಿಸುವಿಕೆಗೆ ಆದ್ಯತೆ ನೀಡಿದಂತಾಗಿದೆ ಹಾಗೂ ಎಲ್ಲಾ ಸರ್ಕಾರ ಗ್ರಾಮ ಸಭೆಗೆ ಉತ್ತರದಾಯಿಯಾಗಿ ಮಾಡಿದ್ದು ಅತ್ಯುತ್ತಮ ಎನ್ನಬಹುದು.

3ಎಫ್‌ಗಳು:

ಅಭಿವೃದ್ಧಿ ಬರೀ ಚಟುವಟಿಕೆಯಲ್ಲ ಆಯಾ ಸರ್ಕಾರದ ಜವಾಬ್ದಾರಿ, ಎನ್ನುವ ಮೂಲಕ ಜವಾಬ್ದಾರಿ ನಕ್ಷೆ ಎಂದು ರೂಪಿಸಿದ್ದು ಮಾತ್ರವಲ್ಲ, 'ಎಲ್ಲಿ ಕೆಲಸವೋ ಅಲ್ಲೇ ಯೋಜನೆ, ಅಲ್ಲೇ ನಿರ್ವಹಣೆ, ಅಲ್ಲಿಗೇ ಸಂಪನ್ಮೂಲ' ಎನ್ನುವ ನೆಲೆಯಲ್ಲಿ ಯಾವ ಸರ್ಕಾರ, ಯಾವ ಜವಾಬ್ದಾರಿ ಎಂದು ಸ್ಪಷ್ಟಪಡಿಸುವ ಮೂಲಕ ಹಿಂದಿನ ಗೊಂದಲಗಳನ್ನು ಪರಿಹರಿಸಿದ್ದಾರೆ. ಆ ಕೆಲಸದ ಯೋಜನೆ ಅಲ್ಲೇ ತಯಾರಾಗುವುದರಿಂದ ಅದಕ್ಕೆ ಸಂಬಂಧಪಟ್ಟ ಸಂಸ್ಥೆ ಅದೇ ಸರ್ಕಾರಕ್ಕೆ ವರ್ಗಾವಣೆಗೊಳ್ಳುವುದು, ಅದಕ್ಕೆ ಪೂರಕ ಹಣಕಾಸು ಅದೇ ಸರ್ಕಾರಕ್ಕೆ ನೇರ ಜಮಾವಣೆಗೊಳ್ಳುವುದು ಇಲ್ಲಿಯ ವಿಶೇಷ. ಈ ಮೂಲಕ ಈ ಹಿಂದೆ ಯೋಜನೆ ಎಲ್ಲೋ ಆಗಿ ಅನುಷ್ಠಾನಗೊಳಿಸಲು ಇಲಾಖೆಯಾಗಿ, ಸ್ಥಳೀಯ ಸಕಾರಕ್ಕೆ ಅದರ ಮೇಲೆ ಹಿಡಿತವಿಲ್ಲದಂತಾಗಿತ್ತು. ಗ್ರಾಮ ಸಭೆಗೆ ಮಾಹಿತಿಯೇ ಇಲ್ಲವೆನ್ನುವ ಪರಿಸ್ಥಿತಿಯಿತ್ತು. ಈ ಜವಾಬ್ದಾರಿ ನಕ್ಷೆಯಲ್ಲಿ ಯಾರು ಏನು ಕೆಲಸ ಎನ್ನುವ ಸ್ಪಷ್ಟತೆಯಲ್ಲದೆ ಅದಕ್ಕೆ ಸಂಬಂಧಪಟ್ಟ ಹೊಣೆಗಾರಿಕೆ, ಹೊಣೆಗಾರರು ಮತ್ತು ಹಣಕಾಸುಗಳು, ಈ ಮೂರೂ ಆಯಾ ಸರ್ಕಾರಕ್ಕೆ ನೇರ ಲಭ್ಯವಾಗುವುದರ ಮೂಲಕ ಮಹತ್ತರ ಆಶಾದಾಯಕ ಬದಲಾವಣೆ ಕಾಣಬಹುದು, ಇದರಿಂದ ಅಭಿವೃದ್ಧಿ ಎನ್ನುವುದು ಕೇವಲ ಕೆಲಸವಾಗದೇ ಆಯಾ ಸರ್ಕಾರದ ಜವಾಬ್ದಾರಿಯಾಗುತ್ತದೆ.

ಎಲ್ಲಾ ಸರ್ಕಾರ ಸಮಾನ:

ಈ ವರದಿಯ ಇನ್ನೊಂದು ಮುಖ್ಯ ಅಂಶವೆಂದರೆ ಒಂದು ಸರ್ಕಾರದ ಮೇಲೆ ಇನ್ನೊಂದು ಸರ್ಕಾರದ ಸವಾರಿಗೆ ಅವಕಾಶವಿಲ್ಲ. ಅದೇ ಸಮಯದಲ್ಲಿ ಎಲ್ಲಾ ಸರಕಾರವನ್ನು ಗ್ರಾಮ ಸಭೆಗೆ ಉತ್ತರದಾಯಿಯನ್ನಾಗಿ ಮಾಡಿ ಪ್ರಜಾಪ್ರಭುತ್ವದ ವಿಕೇಂದ್ರೀಕರಣ ಮಾತ್ರವಲ್ಲ ಜನತೆಯ ಪ್ರಜಾಪ್ರಭುತ್ವದ ಹಕ್ಕನ್ನು ಅವರಲ್ಲೇ ಪುನರ್ ಸ್ಥಾಪನೆಗೆ ದಾರಿ ಮಾಡಿಕೊಟ್ಟಿದೆ.

ಗ್ರಾಮ ಪಂಚಾಯತ್, ತಾಲೂಕು ಪಂಚಾಯತ್, ಜಿಲ್ಲಾ ಪಂಚಾಯತ್ ಸಹಜ ಸಂಬಂಧಗಳನ್ನು ಕಲ್ಪಿಸುತ್ತಾ ಗ್ರಾಮ ಮಟ್ಟದ ಕೆಲಸಕ್ಕೆ ಪೂರ್ಣ ಜವಾಬ್ದಾರಿಯನ್ನು ಗ್ರಾಮ ಪಂಚಾಯತ್‌ಗೆ ನೀಡಿದ್ದು ಮಾತ್ರವಲ್ಲದೇ ಅಲ್ಲೇನು ಸಾಧ್ಯ ಎನ್ನುವುದನ್ನು ಗಮನಿಸಿ ಆ ಕಾರ್ಯ ಅವರಿಗೆ ನೀಡಲಾಗಿದೆ. ಮಾತ್ರವಲ್ಲ ಅದಕ್ಕೆ ಸಂಬಂಧಪಟ್ಟ ಹಣಕಾಸು, ಸಿಬ್ಬಂದಿ ಅಲ್ಲೆ ನಿಯೋಜಿಸಿದ್ದಾರೆ. ಗ್ರಾಮ ಮಟ್ಟಕ್ಕಿಂತ ಮೇಲಿನ ಹಲವು ಗ್ರಾಮಗಳಿಗೆ ಸಂಬಂಧಪಟ್ಟ ಕಾರ್ಯಕ್ರಮ ಉದಾಹರಣೆ: ಬಹುಗ್ರಾಮ ಕುಡಿಯುವ ನೀರು ಹೀಗೆ ಹಲವು ಗ್ರಾಮ ಕೂಡಿ ತಾಲೂಕು ಮಟ್ಟದಲ್ಲಿ ಆಗುವ ಕೆಲಸಗಳನ್ನು ತಾಲೂಕು ಮಟ್ಟದ ನೆಲೆಯಲ್ಲಿ ರೂಪಿಸಿದ್ದಾರೆ.

ಹಾಗೆಯೇ ಇಡೀ ಜಿಲ್ಲೆಯ ಆದ್ಯತೆ ಜಿಲ್ಲಾ ಮಟ್ಟದ ಕೆಲಸ ಕಾರ್ಯ, ಯೋಜನೆ, ಸಿಬ್ಬಂದಿ, ಹಣಕಾಸು ಜಿಲ್ಲಾ ಮಟ್ಟಕ್ಕೆ ಹೀಗೆ ಮೂರೂ ನೆಲೆಯ ಪಂಚಾಯತ್‌ಗಳಾಗಿ ಸಹಜ ಸಂಬಂಧ ಕಲ್ಪಿಸಿದ್ದಲ್ಲದೇ ಪರಸ್ಪರ ಕೊಡು ಕೊಳ್ಳುವಿಕೆಗೆ ಅವಕಾಶ ಕಲ್ಪಿಸಿದ್ದಾರೆ. ಇದೆಲ್ಲಾ ಯೋಚಿಸುತ್ತಾ ಮೂರೂ ಹಂತದ ಪಂಚಾಯತ್‌ಗಳಿಗೆ ಅವರದ್ದೇ ಆದ ಸ್ವಾಯತ್ತತೆ, ಸಮಾನ ಸ್ಥಾನ, ಕಾರ್ಯಗಳನ್ನು ರೂಪಿಸಿದ್ದು ಈ ವರದಿಯ ವಿಶೇಷತೆ.

ಅಧ್ಯಕ್ಷರಿಗೆ ಪೂರ್ಣ ಅಧಿಕಾರ:

ಮೂರೂ ಹಂತದ ಅಧ್ಯಕ್ಷರು ಪೂರ್ಣಕಾಲೀನ ಮುಖ್ಯ ಕಾರ್ಯನಿರ್ವಾಹಕರು. ಅವರು ಬರೀ ಅಲಕಾಂರಿಕವಾಗಿಯಾಗಲೀ, ಬರೀ ಸಭಾಧ್ಯಕ್ಷತೆವಹಿಸುವುದಾಗಲೀ ಅಲ್ಲ. ತುರ್ತು ಸಂದರ್ಭದಲ್ಲಿ, ಅನಾಹುತ, ನೆರೆ, ಬೆಂಕಿ, ಅಪಘಾತ, ಮುಂತಾದ ಸಂದರ್ಭದಲ್ಲಿ ನೆರವು ನೀಡಲು, ತುರ್ತು ಪರಿಹಾರ ಕಾರ್ಯ ನಿರ್ವಹಿಸಲು 5 ಲಕ್ಷದ ವರೆಗೆ ತುರ್ತು ಪರಿಹಾರ ನಿಧಿ ರೂಪಿಸಲಾಗಿದೆ.

ಪಂಚಾಯತ್ ಎಲ್ಲಾ ಆಗು ಹೋಗುಗಳ ಮೇಲೆ ಇವರು ಮೇಲುಸ್ತುವಾರಿ ಮಾತ್ರವಲ್ಲ ಅಧ್ಯಕ್ಷರಿಗೆ ಪರಿಣತ ಖಾಸಗೀ ಕಾರ್ಯದರ್ಶಿಗಳನ್ನು ನೇಮಿಸಿಕೊಳ್ಳಲು ಅವಕಾಶವಿದೆ. ಮಹಿಳಾ ಅಧ್ಯಕ್ಷರಾದರೆ ಮಹಿಳಾ ಕಾರ್ಯದರ್ಶಿಯನ್ನು ನೇಮಕ ಮಾಡಿಕೊಳ್ಳಬಹುದಾಗಿದೆ. ತನ್ನ ಗಂಡ, ಮಗ, ತಂದೆ ಹೀಗೆ ತನ್ನ ಸಂಬಂಧದೊಳಗೆ ನೇಮಕಾತಿ ಮಾಡಿಕೊಳ್ಳಲು ಸಾಧ್ಯವಾಗದಂತೆ, ನಿಯಮ ರೂಪಿಸಲು ಹೇಳಲಾಗಿದೆ. ಮಾತ್ರವಲ್ಲ ಅಧ್ಯಕ್ಷರ ತರಬೇತಿ ಸಮಯದಲ್ಲಿ ಖಾಸಗೀ ಕಾರ್ಯದರ್ಶಿ ಅವರೊಡನೆ ಪೂರ್ಣಕಾಲೀನವಾಗಿ ತರಬೇತಿ ಪಡೆಯಬೇಕು. ಆಮೂಲಕ ಅನಕ್ಷರಸ್ಥರು ಮಾಹಿತಿ ಕೊರತೆ, ಕೌಶಲ್ಯ ಕೊರತೆಗಳನ್ನು ಪರಿಹರಿಸಲು ಒಂದು ಅತ್ಯುತ್ತಮ ಪ್ರಯತ್ನ. ಈ ಮೂಲಕ ಅಧ್ಯಕ್ಷರನ್ನು ಯಾವುದೇ ಅಧಿಕಾರಿ ಮಾಹಿತಿ ನೀಡದೇ ಇರುವುದಾಗಲೀ, ವಂಚಿಸುವುದಾಗಲೀ, ಯಾವುದೇ ಸುತ್ತೋಲೆ ವಿವರಿಸದೇ ಇರುವುದಾಗಲೀ ಸಾಧ್ಯವಾಗುವುದಿಲ್ಲ. ಮೂರು ಹಂತದ ಅಧ್ಯಕ್ಷರಿಗೆ ಅವರವರ ಜವಾಬ್ದಾರಿ ಮೇಲೆ ಸೂಕ್ತ ಸಂಬಳ ನೀಡಲು ಶಿಫಾರಸ್ಸು ಮಾಡಲಾಗಿದೇ. ಆಮೂಲಕ ಅಧ್ಯಕ್ಷರು ಪೂರ್ಣಕಾಲೀನವಾಗಿ ಕೆಲಸ ಮಾಡಲು ಇರುವ ಮುಖ್ಯ ಅಡಚಣೆ ದೂರವಾಗುತ್ತದೆ. ಅಲ್ಲದೇ ಪಂಚಾಯತ್‌ಗೆ ಆಯ್ಕೆಗೊಂಡ ಬದಿಗೊತ್ತಲ್ಪಟ್ಟ ವರ್ಗದ ಸದಸ್ಯರು ಅಧ್ಯಕ್ಷರಾದಾಗ ತಮ್ಮ ದೈನಂದಿನ ಆದಾಯದ ಮೂಲ ಕಳೆದುಕೊಳ್ಳುವ ಹೆದರಿಕೆ ಇಲ್ಲ.

ತಿಂಗಳಿಗೊಬ್ಬ ಅಧ್ಯಕ್ಷರಿಲ್ಲ:

ಪದೇ ಪದೇ ಅಧ್ಯಕ್ಷರ ಮೇಲೆ ಅವಿಶ್ವಾಸ ಗೊತ್ತುವಳಿ, ಅಧ್ಯಕ್ಷರ ಅವಧಿಯ ಹಂಚಿಕೆ ಮುಂತಾದ ಕೆಟ್ಟ ಚಾಳಿ ನಿಲ್ಲಿಸಲು ಈ ವರದಿಯಲ್ಲಿ ಗಂಭೀರ ಪ್ರಯತ್ನ ಪಡಲಾಗಿದೆ. ಅದರಲ್ಲಿ ಮುಖ್ಯವಾಗಿ ಗಂಭೀರ ಭ್ರಷ್ಟಾಚಾರ, ಕ್ರಿಮಿನಲ್ ನಡಾವಳಿ, ಕಾರ್ಯಕ್ರಮಗಳ ಅನುಷ್ಠಾನ ಮಾಡದೇ ನಿರ್ಲಕ್ಷ್ಯ ಇಂತಹ ಗಂಭೀರ ಸಂದರ್ಭಗಳಲ್ಲದೇ ಬೇರೆ ಸಂದರ್ಭದಲ್ಲಿ ಅವಿಶ್ವಾಸ ಗೊತ್ತುಪಡಿಸಲು ಕನಿಷ್ಟ ಮೂರು ವರ್ಷ ಆಗಿರಬೇಕು. ಅದರ ಮೊದಲು ಅವಿಶ್ವಾಸ ಮಂಡಿಸುವಂತಿಲ್ಲ.

ರಾಜೀನಾಮೆ ಪಡೆಯುವುದಿದ್ದರೂ ಅಥವಾ ನೀಡುವುದಿದ್ದರೂ ಸ್ಪಷ್ಟ ನಿಜ ಕಾರಣಗಳಿರಬೇಕೆಂದಿದೆ. ಉದಾಹರಣೆ: ಮಾನಸಿಕ, ದೈಹಿಕವಾಗಿ ಕಾರ್ಯನಿವಹಿಸಲಾಗದಂತ ಗಂಭೀರ ಅಶಕ್ತತೆ ಇರಬೇಕು ಎಂದು ಶಿಫಾರಸು ಮಾಡಿದೆ.

ವಾಪಾಸು ಕರೆಸುವ ಹಕ್ಕು:

ಗ್ರಾಮ ಸಭೆಗೆ ತಾವು ಆಯ್ಕೆ ಮಾಡಿದ ಸದಸ್ಯರು, ಭ್ರಷ್ಟಾಚಾರ, ಕ್ರಿಮಿನಲ್ ಚಟುವಟಿಕೆ, ಕಾರ್ಯಕ್ರಮ ಅನುಷ್ಠಾನಗೊಳಿಸದೇ ಇರುವ ಸಂದರ್ಭದಲ್ಲಿ ವಾಪಾಸು ಕರೆಸಿಕೊಳ್ಳುವ ಹಕ್ಕನ್ನು ನೀಡಲು ಶಿಫಾರಸ್ಸು ಮಾಡಿದೆ. ಇದು ನಿಜವಾಗಿಯೂ ಒಳ್ಳೆಯ ಆಲೋಚನೆ. ಯಾವುದೇ ಆಯ್ಕೆಗೊಂಡ ಸದಸ್ಯರು ಸರಿಯಾಗಿ ಜವಾಬ್ದಾರಿ ನಿರ್ವಹಿಸದೇ ಇದ್ದಲ್ಲಿ ಮುಂದಿನ ಚುನಾವಣೆವರೆಗೆ ಕಾಯದೇ ಕ್ರಮಕೈಗೊಳ್ಳಲು ಅವಕಾಶ ನೀಡಿದ್ದು ನಿಜವಾಗಿ ಎಲ್ಲರೂ ಗ್ರಾಮ ಸಭೆಗೆ ಬದ್ದರಾಗಿರಲು ಉತ್ತರದಾಯಿಯಾಗಿ ಮಾಡಲು ಇದೊಂದು ಸಾಧನ.

ಇನ್ನೊಂದು ಮುಖ್ಯ ಶಿಫಾರಸ್ಸು ಮೂರು ಹಂತದ ಪಂಚಾಯತ್‌ನ ಸಿಬ್ಬಂದಿ ಮುಖ್ಯಸ್ಥರಾದ ಪಿ.ಡಿ.ಒ., ಇ.ಒ., ಸಿ.ಇ.ಒ, ಆಯಾ ಹಂತದ ಸ್ಥಳೀಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಎಂದು ಪರಿಗಣಿಸಲು ಹೇಳಿದ್ದು ಅತೀ ಮುಖ್ಯ. ಇದು ಒಂದು ಸ್ಥಳೀಯ ಸರ್ಕಾರವಾಗಿ ಗೌರವ ಪಡೆಯಲು, ತಾನು ಒಂದು ಸರ್ಕಾರವೆಂದು ಕಾರ್ಯಾಚರಿಸಲು ಪೂರಕವಾಗಿರುವಂತಹ ಸಲಹೆ. ಮತ್ತು ಅವರು ಪಂಚಾಯತ್‌ಗೆ, ಅಧ್ಯಕ್ಷರಿಗೆ ಉತ್ತರದಾಯಿಯಾಗಿರುವಂತೆ ಸಲಹೆ ರೂಪಿಸಿದ್ದು ಕೂಡ ಸ್ಥಳೀಯ ಆಡಳಿತಕ್ಕೆ ಒಂದು ಬದ್ಧತೆ ನೀಡುತ್ತದೆ. ಜನರಿಗೆ ನಮಗಾಗಿ ಕೆಲಸ ಮಾಡುವ ಸರ್ಕಾರ ನಮ್ಮ ಹತ್ತಿರವೇ ಎನ್ನುವ ವಾತಾವರಣ ಇದು ಸೃಷ್ಟಿಸುತ್ತದೆ.

ಪಂಚಾಯತ್ ರಾಜ್ ಆಡಳಿತ ಸೇವೆ

ಇಂದು ಪಂಚಾಯತ್ ರಾಜ್ ಸಂಸ್ಥೆಗಳು ಎರವಲು ಸೇವೆಯಿಂದಲೇ ನಡೆಯುತ್ತಿವೆ. ಕಾರ್ಯನಿರ್ವಹಣಾ ಅಧಿಕಾರಿಗಳು, ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು, ಇಂಜಿನಿಯರ್‌ಗಳು ಇವರೆಲ್ಲರನ್ನೂ ಬೇರೆ ಬೇರೆ ಇಲಾಖೆಗಳಿಂದ ಎರವಲು ಪಡೆದು ಕಾರ್ಯನಿರ್ವಹಿಸುವಂತಹ ದುಃಸ್ಥಿತಿ ಇದೆ. ಇದು ಮುಖ್ಯವಾಗಿ ಹಾಗೆ ಎರವಲು ಬಂದವರು ಪಂಚಾಯತ್ ರಾಜ್‌ಗೆ ನಿಷ್ಠರಾಗಿರುತ್ತಾರೆ ಎಂದು ಹೇಳಲು ಸಾಧ್ಯವಿಲ್ಲವಾಗುತ್ತದೆ. ಮತ್ತು ಪಂಚಾಯತ್ ರಾಜ್ ಬಗ್ಗೆ ಅವರಿಗೆ ಮಾಹಿತಿಗಳ ಕೊರತೆಯು ಕಾಡುತ್ತದೆ. ಆ ನೆಲೆಯಲ್ಲಿ ಇಡೀ ಪಂಚಾಯತ್ ರಾಜ್ ವ್ಯವಸ್ಥೆ ಬಲಪಡಿಸಲು 3 ವ್ಯವಸ್ಥೆಯನ್ನು ಸಲಹೆ ಮಾಡಿದೆ.

1. ಕರ್ನಾಟಕ ಪಂಚಾಯತ್ ರಾಜ್ ಆಡಳಿತ ಸೇವೆ
2. ಕರ್ನಾಟಕ ಪಂಚಾಯತ್ ರಾಜ್ ಆಡಳಿತ ಸೇವಾ ಮಂಡಳಿ
3. ಪಂಚಾಯತ್ ರಾಜ್ ನಿರ್ದೇಶನಾಲಯ / ಕಮಿಷನರೇಟ್

ಈ ಮೂಲಕ ಪಂಚಾಯತ್ ರಾಜ್ ಅಗತ್ಯ ಮಾನವ ಸಂಪನ್ಮೂಲ ಪಡೆಯಲು, ಆಡಳಿತ ನೀತಿ ನಿಯಮ ರೂಪಿಸಲು, ಸಿಬ್ಬಂದಿ ಕೊರತೆ ಇಲ್ಲವಾಗಿಸಲು ಹಾಗೂ ವಿಶೇಷವಾಗಿ ಅವರಿಗೆ ಪಂಚಾಯತ್ ರಾಜ್ ಬಗ್ಗೆ ಅಗತ್ಯ, ಮಾಹಿತಿ, ಕೌಶಲ್ಯ ನಡವಳಿಕೆ ರೂಪಿಸುವ ಮೂಲಕ ಪರಿಣಾಮಕಾರಿ ಆಡಳಿತ ನೀಡಲು ಮತ್ತು ಬದ್ಧತೆಯನ್ನು ಪಡೆಯಲು ಸಾಧ್ಯ

ಹಣಕಾಸು

ಹಣಕಾಸಿಗೆ ಸಂಬಂಧಪಟ್ಟು ಎರಡು ಪ್ರಮುಖ ಶಿಫಾರಸ್ಸುಗಳನ್ನು ಮಾಡಿದೆ.

1. ರಾಜ್ಯ ಬಜೆಟ್‌ನ 30% ಹಣಕಾಸು ಪಂಚಾಯತ್ ರಾಜ್‌ಗೆ ಮತ್ತು ಅದರಲ್ಲಿ 50% ಮುಕ್ತನಿಧಿ. ಪರಿಶಿಷ್ಟ ಜಾತಿ, ಪಂಗಡ, ಮಹಿಳೆಯರಿಗೆ, ಮಕ್ಕಳಿಗೆ ಹೀಗೆ ಕೆಲವು ಸ್ಪಷ್ಟತೆ, ಬದ್ಧತೆಯೊಡನೆ ಹಣಕಾಸು ಹಂಚಿಕೆಗೆ ಶಿಫಾರಸ್ಸು ಮಾಡಿದೆ. ಈಗಿನ ರಾಜ್ಯ ಬಜೆಟ್‌ನ ಆಧಾರದಲ್ಲಿ ಲೆಕ್ಕ ಹಾಕಿದಲ್ಲಿ ತಾಲೂಕು, ಜಿಲ್ಲಾ ಪಂಚಾಯತ್‌ಗಳಿಗೆ ತಲಾ 7,500 ಕೋಟಿ ಹಣಕಾಸು ಲಭ್ಯವಾಗುವುದಿದ್ದರೆ ಪಂಚಾಯತ್ ಎರಡು ಕೋಟಿಗೂ ಮಿಕ್ಕಿ ವಾರ್ಷಿಕ ಬಜೆಟ್ ಅದರಲ್ಲಿ ಒಂದು ಕೋಟಿಗೂ ಮಿಕ್ಕಿ ಮುಕ್ತನಿಧಿ ಮತ್ತು ಅದನ್ನು ಯಾವುದೇ ಕಾರಣಕ್ಕೆ ಮೂಲದಲ್ಲಿ ಕಡಿತಗೊಳಿಸಿಕೊಡುವಂತಿಲ್ಲ. ಅಲ್ಲದೇ ಅದನ್ನು ಆಯಾ ಹಂತದ ಪಂಚಾಯತ್ ಖಾತೆಗೆ ನೇರ ಹಂಚಿಕೆಗೆ ಶಿಫಾರಸ್ಸು ಮಾಡಿದೆ.

ಈ ಮೂಲಕ ಸ್ಥಳೀಯ ಅಗತ್ಯತೆ ಮೇಲೆ ಯೋಜನೆ, ಕಾರ್ಯಕ್ರಮ ರೂಪಿಸಲು ಸಾಕಷ್ಟು ಸಂಪನ್ಮೂಲ ಹರಿದು ಬರಲಿದೆ. ಇದು ನಿಜವಾದಲ್ಲಿ ಮುಂದಿನ ಐದು ವರ್ಷಗಳಲ್ಲಿ ಗ್ರಾಮೀಣ ಕರ್ನಾಟಕದ ಚಿತ್ರಣವೇ ಬದಲಾವಣೆ ಕಾಣಲಿದೆ.

ಇದನ್ನು ರೂಪಿಸಲು ಯಾರಿಗೆ ಯಾವ ಹಂತಕ್ಕೆ ಏನು ಜವಾಬ್ದಾರಿ ಎನ್ನುವ ವಿವರವಾದ ಜವಾಬ್ದಾರಿ ನಕ್ಷೆ ರೂಪಿಸಿದೆ. ಇದು ಬದ್ಧತೆಯನ್ನು, ಉತ್ತರದಾಯಿತ್ವವನ್ನು ಪಾರದರ್ಶಕತೆಯನ್ನು ಗಟ್ಟಿ ಮಾಡುತ್ತದೆ.

2. ಜನಕೇಂದ್ರಿತ ಯೋಜನೆ, ತಳಮಟ್ಟದಿಂದ ರಾಜ್ಯಮಟ್ಟದವರೆಗೆ

ಈವರೆಗೆ ರಾಜ್ಯಮಟ್ಟದಲ್ಲಿ ಯೋಜನೆಗಳು ರೂಪುಗೊಂಡು ಹೇರಲ್ಪಡುತ್ತಿದ್ದವು. ಈ ವರದಿಯಲ್ಲಿ ಗ್ರಾಮಸಭೆ ಮಟ್ಟದಿಂದ ಯೋಜನೆ ರೂಪಿಸಲು ಕಾರ್ಯವಿಧಾನ ಸಲಹೆ ಮಾಡಿದೆ. ಅದಕ್ಕಾಗಿ ಸಮಯ ಮಿತಿ ನಿಗದಿಗೊಳಿಸಿದೆ, ಜವಾಬ್ದಾರಿ ಸ್ಪಷ್ಟ ಮಾಡಿದೆ. ಪ್ರತಿ ವರ್ಷ ಪ್ರತಿ ಪಂಚಾಯತ್‌ನಲ್ಲಿ ಮುಂದಿನ ಆರ್ಥಿಕ ವರ್ಷಕ್ಕೆ ಈ ವರ್ಷದ ಅಕ್ಟೋಬರ್‌ನಲ್ಲೇ ಬಜೆಟ್ ಸಭೆ ನಡೆದು ಗ್ರಾಮ ಸಭೆಯಲ್ಲಿ ಅಂಗೀಕಾರಗೊಳ್ಳಬೇಕು. ಹಾಗೇ ಯೋಜನೆ ಮಾಡಲು ಪರಿಣಿತರನ್ನು ಬಳಸಿಕೊಳ್ಳಲು ಅವಕಾಶ ಮಾಡಿಕೊಡಲಾಗಿದೆ.

ಮತ್ತು ಅದು ತಾಲೂಕು ಮಟ್ಟದಲ್ಲಿ ತಾಲೂಕು ಯೋಜನೆ ಆಗಿ ಕ್ರೋಢೀಕರಣಗೊಳ್ಳಬೇಕು. ಅದಕ್ಕಾಗಿ ತಾಲೂಕು ಮಟ್ಟದಲ್ಲಿ ತಾಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿ ರಚಿಸಲು ಸಲಹೆ ನೀಡಿದೆ.

ಈ ತಾಲೂಕು ಯೋಜನೆ, ಜಿಲ್ಲಾ ಯೋಜನಾ ಸಮಿತಿಗೆ ಹೋಗಿ ಅಲ್ಲಿ ಜಿಲ್ಲಾ ಮಟ್ಟದ ಯೋಜನೆ ರೂಪುಗೊಂಡು ಅದು ರಾಜ್ಯಮಟ್ಟದ ಕರ್ನಾಟಕ ವಿಕೇಂದ್ರಿತ ಯೋಜನೆ ಮತ್ತು ಅಭಿವೃದ್ಧಿ ಮಂಡಳಿಯಲ್ಲಿ ಕ್ರೋಢೀಕರಣಗೊಂಡು ಕರ್ನಾಟಕದ ಸಮಗ್ರ ಗ್ರಾಮೀಣ ರಾಜ್ಯ ಯೋಜನೆ ರೂಪಿಸುತ್ತದೆ.

ಈ ಇಡೀ ಯೋಜನೆ ಪ್ರಕ್ರಿಯೆಗೆ ಗ್ರಾಮ ಮಟ್ಟದ ಯೋಜನೆಯೇ ತಳಹದಿ ಆಗುತ್ತದೆ. ಇದೊಂದು ಅದ್ಭುತ ಆಲೋಚನೆ ಇಡೀ ರಾಜ್ಯದ ವಾರ್ಷಿಕ ಬಜೆಟ್‌ನಲ್ಲಿ ಇಡೀ ರಾಜ್ಯದ ಜನತೆಯ ಆಶೋತ್ತರಗಳ ಮೇಲೆ ಅವರ ಅವಶ್ಯಕತೆ, ಅಗತ್ಯತೆ ಮೇಲೆ ವಾಸ್ತವಿಕ ಕಾರ್ಯ ಸಾಧ್ಯ ಯೋಜನೆಗೆ ಇದು ಚಾಲನೆ ನೀಡುತ್ತದೆ. ಈ ವರ್ಷದ ಅಕ್ಟೋಬರ್‌ನಲ್ಲಿ ಪ್ರಾರಂಭಗೊಂಡ ಈ ಪ್ರಕ್ರಿಯೆ ಮುಂದಿನ ವರ್ಷದ ಜನವರಿಯಲ್ಲಿ ರಾಜ್ಯ ಮಟ್ಟಕ್ಕೆ ಕ್ರೋಢೀಕರಣಗೊಳ್ಳುತ್ತದೆ. ಇದಲ್ಲದೇ ಈ ವರದಿಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಅವರದ್ದೇ ವಿಶೇಷ ಗ್ರಾಮ ಸಭೆ. ಮಕ್ಕಳು ಮಹಿಳೆಯರಿಗೆ ವಿಶೇಷ ಗ್ರಾಮ ಸಭೆ- ಈ ಮೂಲಕ ಸಾಮಾಜಿಕ ನ್ಯಾಯಕ್ಕೆ ಹೆಚ್ಚು ಒತ್ತು ನೀಡಲಾಗಿದೆ.

ಚುನಾವಣಾ ಸುಧಾರಣೆ:

ಪ್ರಜಾಪ್ರಭುತ್ವದ ಮುಖ್ಯ ಕಾರ್ಯವಾದ ಈಗೀಗ ತೀರ ಚರ್ಚೆ, ಟೀಕೆಗೆ ಗ್ರಾಸವಾಗುತ್ತಿರುವ ಚುನಾವಣೆಗಳ ಬಗ್ಗೆ ಗಂಭೀರ ಸಲಹೆಗಳು ನೀಡಿವೆ. ಅದರಲ್ಲಿ ಮುಖ್ಯವಾದದ್ದು: ಅಭ್ಯರ್ಥಿಗಳ ಚುನಾವಣಾ ವೆಚ್ಚ ಸರ್ಕಾರವೇ ಭರಿಸುವುದು ಈ ಮೂಲಕ ಚುನಾವಣಾ ವೆಚ್ಚಕ್ಕೆ ಕಡಿತ. ಒಂದು ಕ್ಷೇತ್ರಕ್ಕೆ ಒಬ್ಬರೇ ಸದಸ್ಯರು ಆ ಮೂಲಕ ಆ ಕ್ಷೇತ್ರಕ್ಕೆ ಆ ಸದಸ್ಯರೇ ಬದ್ಧರು. ಕ್ಷೇತ್ರದ ವಿಸ್ತಾರ, ಗಡಿ, ಹಂಚಿಕೆ, ಮೀಸಲಾತಿ ಇವೆಲ್ಲಾ ರಾಜ್ಯ ಚುನಾವಣಾ ಆಯೋಗಕ್ಕೆ ಅಧಿಕಾರ ನೀಡಲಾಗಿದೆ. ಇಡೀ ಚುನಾವಣಾ ಪ್ರಕ್ರಿಯೆ ಹತ್ತು ದಿನಗಳಲ್ಲಿ ಪರಿಪೂರ್ಣಗೊಳಿಸಲು ಸಲಹೆ ನೀಡಲಾಗಿದೆ. ಚುನಾವಣಾ ಆಯೋಗವೇ ಸಾರ್ವಜನಿಕ ಸಭೆ ಏರ್ಪಡಿಸಿ ಅಭ್ಯರ್ಥಿಗಳ ಪ್ರಚಾರ ಮಾಡಲು ನಿರ್ಧಾರ ತೆಗೆದುಕೊಳ್ಳಬೇಕು ಎಂದು ಸಲಹೆ ನೀಡಲಾಗಿದೆ. ಚುನಾವಣೆ ಘೋಷಣೆಗೊಂಡ ದಿನದಿಂದ ಇಡೀ ಪ್ರಕ್ರಿಯೆ ಮುಗಿಯುವವರೆಗೆ ಎಲ್ಲಾ ಮದ್ಯದ ಅಂಗಡಿಗೆ ಬೀಗ ಮುದ್ರೆ ಹಾಕಿ ಬೀಗದ ಕೈಗಳನ್ನು ಜಿಲ್ಲಾಧಿಕಾರಿಗಳ ಬಳಿಯಲ್ಲಿ ಠೇವಣಿ ಇಡಬೇಕು. ಇಡೀ ಜಿಲ್ಲೆಯಲ್ಲಿ ಮದ್ಯ ವಿತರಣೆ ಇಲ್ಲ. ಹೀಗೆ ಚುನಾವಣಾ ಅಕ್ರಮ ತಡೆಯಲು ವಿಶೇಷ ಪ್ರಯತ್ನ ಮಾಡಲಾಗಿದೆ.

ಕೊನೆಯದಾಗಿ ವಿವಾದ ಇತ್ಯರ್ಥ ಮಾಡಲು ನ್ಯಾಯ ಪಂಚಾಯತ್, ಜಿಲ್ಲಾ ಮಟ್ಟದಲ್ಲಿ ಒಂಬುಡ್ಸ್‌ಪರ್ಸನ್ ನೇಮಕ ಹೀಗೆ ವ್ಯಾಜ್ಯ, ವಿವಾದ ಇತ್ಯರ್ಥಗಳಿಗೆ ಅವಕಾಶ ನೀಡಲಾಗಿದೆ. ಸಂಪನ್ಮೂಲ ಕ್ರೋಢೀಕರಣಕ್ಕೆ ವಿವಿಧ ಸಲಹೆಗಳು ಮೂಡಿದೆ. ಎಲ್ಲಾ ಹಂತಗಳಲ್ಲಿ ಪಾರದರ್ಶಕತೆಗೆ ಆದ್ಯತೆ, ಮಹಿಳೆಯರು ಕಾರ್ಯನಿರ್ವಹಿಸಲು ವಾತಾವರಣ ನಿರ್ಮಾಣ, ಅಗತ್ಯ ಸೌಲಭ್ಯಗಳ ಸ್ಥಾಪನೆ. ಹೀಗೆ ಜನಕೇಂದ್ರಿತ ಪ್ರಜಾಪ್ರಭುತದ್ವ ಬೆಳವಣಿಗೆಯಲ್ಲಿ ಒಂದು ಮೈಲಿಗಲ್ಲು- ರಮೇಶ್‌ಕುಮಾರ್ ಸಮಿತಿ ಸಲ್ಲಿಸಿದ ಈ ವರದಿ ಎನ್ನಬಹುದು.

ಕರ್ನಾಟಕ ರಾಜ್ಯವು ವಿಕೇಂದ್ರಿಕರಣದ ಹಾದಿಯಲ್ಲಿ ಹಲವಾರು ಏಳು-ಬೀಳು ಕಂಡಿದೆ. ಹಲವಾರು ಸಾಧನೆ ಮಾಡಿ ಯಶಸ್ಸು ಕಂಡಿದೆ. ಕಳೆದ 25 ವರ್ಷಗಳ ಅನುಭವ, ಸಾಧನೆ, ಎಡರು-ತೊಡರುಗಳು, ಸಾಧಕ-ಬಾಧಕಗಳನ್ನೆಲ್ಲ ಯೋಚನೆ ಮಾಡಿ, ನಮ್ಮ ಸಂವಿಧಾನದ ಆಶಯದ ಚೌಕಟ್ಟನ್ನು ಇಟ್ಟುಕೊಂಡು, ಸಾಮಾಜಿಕ ನ್ಯಾಯಕ್ಕೆ ಒತ್ತುಕೊಟ್ಟು ಗಾಂಧಿ ಕನಸಿನ ಗ್ರಾಮ ಸ್ವರಾಜ್ಯಕ್ಕೆ ಇದೊಂದು ಹೊಸ ದಾರಿ ಕಂಡುಕೊಳ್ಳಲಿದೆ.

ಮುಂದಿನ ಬೆಳಗಾವಿ ಅಧಿವೇಶನದಲ್ಲಿ ಇದು ಅಂಗೀಕಾರಗೊಂಡರೆ ಇಡೀ ದೇಶಕ್ಕೆ ಜನಾಭಿವೃದ್ಧಿಗೆ, ಜನಕೇಂದ್ರಿತ ಯೋಜನೆಗಳಿಗೆ ನಿಜವಾಗಿ ಗ್ರಾಮೀಣಾಭಿವೃದ್ಧಿಗೆ ಇದೊಂದು ಹೊಸ ಭಾಷ್ಯ ಬರೆಯಬಲ್ಲದು. ಅಂದು ಶ್ರೀ ರಾಮಕೃಷ್ಣ ಹೆಗಡೆ-ಶ್ರೀ ನಜೀರ್ ಸಾಬ್ ಜೋಡಿ ರಾಷ್ಟ್ರ ಮಟ್ಟದಲ್ಲಿ ಉಂಟುಮಾಡಿದ ಸಂಚಲನ, ಅದರ ಫಲವಾಗಿ ಶ್ರೀ ರಾಜೀವ ಗಾಂಧಿ ಇಟ್ಟ ದಿಟ್ಟ ಹೆಜ್ಜೆಯ ಮಾದರಿ, ಅದಕ್ಕೆ ಕರ್ನಾಟಕದಲ್ಲಿ ಇಂಬುಕೊಟ್ಟ ಶ್ರೀ ಘೋರ್ಪಡೆಯವರ ಬದ್ಧತೆಯಂತೆ ಶ್ರೀ ಸಿದ್ಧರಾಮಯ್ಯ ಮತ್ತು ಶ್ರೀ ಹೆಚ್.ಕೆ.ಪಾಟೀಲ್ ಜೋಡಿ ಇಡೀ ರಾಷ್ಟ್ರದಲ್ಲಿ ಹೊಸ ಸಂಚಲನ ಮೂಡಿಸಬಲ್ಲುದು. ಕರ್ನಾಟಕವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯಬಲ್ಲದು. ಭಾರತ ದೇಶವಾಗಿ ನಾಳೆ ಯೋಜಿಸುವುದನ್ನು ಕರ್ನಾಟಕ ಇಂದೇ ಸಾಧಿಸಿದ ಗರಿಮೆಗೆ ಪಾತ್ರವಾಗಬಲ್ಲುದು.

ಮುಂದಿನ ವರ್ಷ 2015 ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಯುತ್ತದೆ. ಲಕ್ಷದ ಹತ್ತಿರ ಹತ್ತಿರ ಇರುವ ಸ್ಥಳೀಯ ಸಂಸ್ಥೆ ಪ್ರತಿನಿಧಿಗಳು ಆ ಬಗ್ಗೆ ಒತ್ತಾಯ ತರಬಲ್ಲರೇ, ರಾಜಕೀಯ ಇಚ್ಛಾಶಕ್ತಿ ತೋರಬಲ್ಲರೇ, ಗ್ರಾಮೀಣ ಕರ್ನಾಟಕ ಹೊಸ ಅಭಿವೃದ್ಧಿಯ ಶಕೆ ಬರೆಯಬಲ್ಲದೇ ಇದೆಲ್ಲಾ ಕಾತುರದಿಂದ ಕರ್ನಾಟಕ ನಿರೀಕ್ಷಿಸುತ್ತಿದೆ.

ಮೂರೂ ಹಂತದ ಅಧ್ಯಕ್ಷರು ಪೂರ್ಣಕಾಲೀನ ಮುಖ್ಯ ಕಾರ್ಯನಿರ್ವಾಹಕರು. ಅವರು ಬರೀ ಅಲಕಾಂರಿಕವಾಗಿಯಾಗಲೀ, ಬರೀ ಸಭಾಧ್ಯಕ್ಷತೆವಹಿಸುವುದಾಗಲೀ ಅಲ್ಲ. ತುರ್ತು ಸಂದರ್ಭದಲ್ಲಿ, ಅನಾಹುತ, ನೆರೆ, ಬೆಂಕಿ, ಅಪಘಾತ, ಮುಂತಾದ ಸಂದರ್ಭದಲ್ಲಿ ನೆರವು ನೀಡಲು, ತುರ್ತು ಪರಿಹಾರ ಕಾರ್ಯ ನಿರ್ವಹಿಸಲು 5 ಲಕ್ಷದ ವರೆಗೆ ತುರ್ತು ಪರಿಹಾರ ನಿಧಿ ರೂಪಿಸಲಾಗಿದೆ. ಪಂಚಾಯತ್ ಎಲ್ಲಾ ಆಗು ಹೋಗುಗಳ ಮೇಲೆ ಇವರು ಮೇಲುಸ್ತುವಾರಿ ಮಾತ್ರವಲ್ಲ ಅಧ್ಯಕ್ಷರಿಗೆ ಪರಿಣತ ಖಾಸಗೀ ಕಾರ್ಯದರ್ಶಿಗಳನ್ನು ನೇಮಿಸಿಕೊಳ್ಳಲು ಅವಕಾಶವಿದೆ. ಮಹಿಳಾ ಅಧ್ಯಕ್ಷರಾದರೆ ಮಹಿಳಾ ಕಾರ್ಯದರ್ಶಿಯನ್ನು ನೇಮಕ ಮಾಡಿಕೊಳ್ಳಬಹುದಾಗಿದೆ.

ಅಪೂರ್ವ ಸಂಗ್ರಹ, ಉಚಿತ ಸಾಗಾಟ, ರಿಯಾಯಿತಿ ದರದೊಂದಿಗೆ ನಿಮಗಾಗಲಿದೆ 'ಶ್ರೀ ಸಿದ್ಧಿ' ಯಲ್ಲಿ ಗೃಹಶೋಭೆಯ ಹಿತಾನುಭವ
ಆಧುನಿಕ ಹಾಗೂ ಸಾಂಪ್ರದಾಯಿಕ ಮಾದರಿಯ ಆಕರ್ಷಕ ವಿನ್ಯಾಸದ ಸುಖಾಸೀನ ಪೀಠೋಪಕರಣಗಳ ಮಹಾನ್ ಶ್ರೇಣಿಯ ಬೃಹತ್ ಶೋರೂಂ
ಶ್ರೀ ಸಿದ್ಧಿ ಫರ್ನಿಚರ್ ಸಿದ್ಧಾಪುರ
ದುರ್ಗಾ ಕೃಪಾ ಕಾಂಪ್ಲೆಕ್ಸ್, ಮುಖ್ಯರಸ್ತೆ, ಸಿದ್ಧಾಪುರ-576229, ಕುಂದಾಪುರ ತಾಲೂಕು, ಫೋನ್:08259-284267, ಮೊ: 9448930687

ಶ್ರೀ ಕೃಷ್ಣ ಪೈಪ್
ರಿಜಿಡ್ ಪಿ.ವಿ.ಸಿ.
ಅತ್ಯುತ್ಕೃಷ್ಟ ಗುಣಮಟ್ಟದ ದೀರ್ಘ ಬಾಳಿಕೆಯ ಪೈಪ್
ತಯಾರಕರು :
ಶ್ರೀ ಕೃಷ್ಣ ಪೈಪ್ ಇಂಡಸ್ಟ್ರೀಸ್
ಕೆರೆ, ಹಟ್ಟಿಯಂಗಡಿ, ಕುಂದಾಪುರ, ಉಡುಪಿ ಜಿಲ್ಲೆ
ಫೋನ್ : (08254) 271261, 271361 (R)
264361, 264444 (Factory)